# ಶರಣ–ಶರಣೀಯರ ಬದುಕು ನಮ್ಮ ಬದುಕಿಗೆ ಜೀವಜಲವಾಗಬೇಕು : ಫಕ್ಕಿರೇಶ್ವರ ಶಿವಾಚಾರ್ಯರು



ಗದಗ : ಮಂದಿರ, ಮಸೀದಿ, ಚರ್ಚಗಳನ್ನು ಕಟ್ಟಿದರೆ ನಾಳೆ ಅವು ಬೀಳುತ್ತವೆ, ಬಿದ್ದ ಮೇಲೆ ಅವುಗಳನ್ನು ಮೊದಲಿಗಿಂತ ಚೆನ್ನಾಗಿ ಮರು ನಿರ್ಮಿಸಬಹುದು. ಆದರೆ, ಮಾನವನಲ್ಲಿರುವ ಮಾನವೀಯತೆಯ ಮಂದಿರ ಬಿದ್ದರೆ ಅದನ್ನು ಮರುಕಟ್ಟಲು ಸಾಧ್ಯವಿಲ್ಲ ಎಂದು ಓಂಕಾರೇಶ್ವರ ಶ್ರೀಮಠದ ಪೂಜ್ಯಶ್ರೀ ಫಕ್ಕೀರೇಶ್ವರ ಶಿವಾಚಾರ್ಯರ ಮಹಾಸ್ವಾಮೀಜಿ ಅವರು ಹೇಳಿದರು.

ಅವರು ಗದಗ ತಾಲೂಕಿನ ಕಳಸಾಪುರ ಗ್ರಾಮದ ಈಶ್ವರ ದೇವರ ಹಾಗೂ ಬಸವಣ್ಣ ದೇವರ ಜಾತ್ರಾ ಮಹೋತ್ಸವದ ಅಂಗವಾಗಿ ಶಿವಶರಣೆ ಗುಡ್ಡಾಪುರ ದಾನಮ್ಮದೇವಿ ಪುರಾಣ ಪ್ರವಚನ ಪ್ರಾರಂಭೋತ್ಸವಕ್ಕೆ ಚಾಲನೆ ನೀಡಿ ಮಾತನಾಡಿ, ಮಾನವೀಯತೆ ಅನ್ನುವ ಮಂದಿರವೇ ಶ್ರೇಷ್ಠ ಮಂದಿರವಾಗಬೇಕು. ಜಾತಿಯಿಂದ ದೂರ ಇದ್ದು ನೀತಿಯಿಂದ ಬಾಳಬೇಕು ಅಂತೆಯೇ ಶರಣ ಶರಣೀಯರು ಹಾಗೆ ಬದುಕಿದರು. ಅಂತವರ ಜೀವನ ಅವರ ಬದುಕು ನಮ್ಮ ಜೀವನಕ್ಕೆ ಜೀವಜಲವಾದಾಗ ಅಂತರಂಗದ ದೀಪ ಬೆಳಗುತ್ತದೆ. ದಾನಮ್ಮ ದೇವಿಯ ಜೀವನ ದರ್ಶನ ಪ್ರವಚನ ಕೇಳಿ ಎಲ್ಲರೂ ಕೂಡ ಶರಣರು ಆಗಲು ಸಾಧ್ಯವೆಂದು ಹೇಳಿದರು.

ಪ್ರವಚನಕಾರ ಶಿವಲಿಂಗಯ್ಯಶಾಸ್ತ್ರಿ ಸಿದ್ದಾಪುರವರು ಮಾತನಾಡಿ, ಗುಡ್ಡಾಪುರದ ದಾನಮ್ಮ ದೇವಿಯ ಪ್ರವಚನದಲ್ಲಿ ಮನುಷ್ಯ ಜೀವನದಲ್ಲಿ ಬದುಕಿಗೆ ಬೆಳಕಾಗುವಂತಹ ಎರಡು ಒಳ್ಳೆಯ ಮಾತನ್ನು ಕೇಳಬೇಕು. ರಾಮಕೃಷ್ಣ ಪರಮಹಂಸರ ಸಂಘದಿಂದ ಅವರ ಒಳ್ಳೆಯ ಮಾತಿನಂದ ನರೇಂದ್ರಸ್ವಾಮಿ ವಿವೇಕಾನಂದ ಆದರು. ಅದೇರೀತಿ ಗುರುಗೋವಿಂದರ ಮಾತಿನಂದ ಷರೀಫ್ ಸಾಹೇಬರು ಶಿವಯೋಗಿಯಾದರು. ಹಾನಗಲ್ ಕುಮಾರ ಶಿವಯೋಗಿಯವರ ಮಾತಿನಂದ ಪಂ.ಪಂಚಾಕ್ಷರಿ ಗವಾಯಿಗಳು ಪ್ರಪಂಚದ ಅಂಧ– ಅನಾಥ, ದೀನ–ದಲಿತರ ಮಕ್ಕಳಿಗೆ ಸಂಗೀತ ವಿದ್ಯೆಯನ್ನು ದಾರೆ ಎರೆದು ಅವರ ಬಾಳ ಬೆಳಗಿ ಸಂಗೀತ ಲೋಕದ ಋಷಿಯಾದರು. ಹಾಗೆ ದಾನಮ್ಮದೇವಿ ಗುರು ಶಾಂತವೀರ ಮಹಾಸ್ವಾಮಿಗಳ ಸೇವೆ ಮಾಡಿ ಅವರ ಎರಡು ಮಾತಿನಂದ ಶರಣೆ ಆದರು. ದಾನಮ್ಮನ ಬದುಕಿನ ಧ್ಯಾನದ ಬೆಳಕು ನಮ್ಮೆಲ್ಲರ ಹೃದಯಗಳನ್ನು ಬೆಳಗುವಂತಾಗಲಿ. ನಿತ್ಯ ನಡೆಯುವ ಪ್ರವಚನ ಕೇಳಿ ನಮ್ಮ ಮನಸ್ಸಿನ ಪಾಪಗಳು ಸುಟ್ಟು ಹೋಗುತ್ತವೆ. ಅಕ್ಕಮಹಾದೇವಿ ಒಳ್ಳೆಯ ಮಾತುಗಳು ಹೇಳುವಂತವರ ಸಂಘವನ್ನೇ ಕರುಣಿಸು ಚೆನ್ನಮಲ್ಲಿಕಾರ್ಜುನ ಎಂದು ಪ್ರಾರ್ಥನೆ ಮಾಡಿದ್ದಾಳೆ. ಅಕ್ಕಮಹಾದೇವಿಯಂತೆ ನಮ್ಮೆಲ್ಲರ ಜೀವನ ಆಗಲಿ ಎಂದರು.

ಕಲಬುರಗಿಯ ಸಂಗಮೇಶ್ವರ ಗವಾಯಿ ಪಾಟೀಲ ಅವರಿಂದ ಸಂಗೀತ ಸೇವೆ ಜರುಗಿತು. ತೋಂಟದಾರ್ಯ ಕರಡಿಕಲ್ ತಬಲಾ ಸಾಥ್ ನೀಡಿದರು. ವೇದಿಕೆ ಮೇಲೆ ಗ್ರಾಮ ಪಂಚಾಯತ ಅಧ್ಯಕ್ಷ, ಉಪಾಧ್ಯಕ್ಷ ಹಾಗೂ ಸರ್ವ ಸದಸ್ಯರು, ಗುರು ಹಿರಿಯರು ಉಪಸ್ಥಿತರಿದ್ದರು. ನಂತರ ಮಹಾಪ್ರಸಾದ ಜರುಗಿತು.

# ಡಾ. ಗುರುಲಿಂಗ ಕಾಪಸೆ ಅನುಭಾವ ಪರಂಪರೆಯ ಉಜ್ವಲ ನಕ್ಷತ್ರ : ತೋಂಟದ ಶ್ರೀ



ಗದಗ: ಆಧುನಿಕ ದಿನಮಾನದ ಅಪೂರ್ವ ಅನುಭಾವಿ, ಅರವಿಂದರ ಪೂರ್ಣಯೋಗ ಹಾಗೂ ಶರಣರ ಶಿವಯೋಗದ ಸಮನ್ವಯಿಯಾಗಿದ್ದ ಡಾ. ಗುರುಲಿಂಗ ಕಾಪಸೆ ಅವರು ಲಿಂಗೈಕ್ಯರಾದುದು ಅನುಭಾವ ಪರಂಪರೆಯ ಉಜ್ವಲ ನಕ್ಷತ್ರವೊಂದು ಕಣ್ಮರೆಯಾದಂತಾಗಿದೆ. ಪೂರ್ಣಯೋಗದ ಸಾಧಕರಾಗಿದ್ದ ಮಧುರಚೆನ್ನರ ಪ್ರಭಾವದಲ್ಲಿ ಬೆಳೆದು ಬಂದ ಡಾ. ಕಾಪಸೆ ಶಿವಶರಣರ ವಚನ ಸಾಹಿತ್ಯವನ್ನು ಆಳವಾಗಿ ಅಧ್ಯಯನಸಿದ್ದರು. ಶರಣರ ಅನುಭಾವವನ್ನು ಕುರಿತು ಉದ್ಗ್ರಂಥಗಳನ್ನು ರಚಿಸುವ ಮೂಲಕ ಕನ್ನಡ ಸಾಹಿತ್ಯ ಪ್ರಪಂಚವನ್ನು ಶ್ರೀಮಂತಗೊಳಿಸಿದ ಹಿರಿಮೆ ಅವರದಾಗಿತ್ತು. ನಮ್ಮ ಶ್ರೀಮಠದ ಜೊತೆಗೆ ಅವಿನಾಭಾವ ಸಂಬಂಧ ಹೊಂದಿದ್ದರು. ಇಂತಹ ಅಮೃತಪುತ್ರರ ಅಗಲುವಿಕೆಯಿಂದ ನಮ್ಮ ನಾಡು ಬಡವಾದಂತಾಗಿದೆ ಎಂದು ಡಂಬಳ–ಗದಗ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠದ ಡಾ. ತೋಂಟದ ಸಿದ್ಧರಾಮ ಮಹಾಸ್ವಾಮಿಗಳು ಶೋಕ ಸಂದೇಶದಲ್ಲಿ ತಿಳಿಸಿದ್ದಾರೆ.

ಡಾ. ಗುರುಲಿಂಗ ಕಾಪಸೆ ಅವರು ಪ್ರಾಥಮಿಕ ಹಂತದಿಂದ ಸ್ನಾತಕೋತ್ತರ ಹಂತದವರೆಗಿನ ಎಲ್ಲ ವಿದ್ಯಾರ್ಥಿಗಳಿಗೆ ಪಾಠ–ಪ್ರವಚನ ಮಾಡಿದ ಆದರ್ಶ ಪ್ರಾಧ್ಯಾಪಕರಾಗಿದ್ದರು. ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಪ್ರಾಧ್ಯಾಪಕರಾಗಿ ಬೆಳಗಾವಿಯ ರಾಣಿಚೆನ್ನಮ್ಮ ಸ್ನಾತಕೋತ್ತರ ಕೇಂದ್ರದ ಆಡಳಿತಾಧಿಕಾರಿಯಾಗಿ ಸ್ಮರಣೀಯ ಸೇವೆ ಸಲ್ಲಿಸಿದ್ದರು. ಹಲವಾರು ಸಂಶೋಧನ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿದ್ದ ಡಾ. ಕಾಪಸೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವಾನ್ವಿತ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದರು. ಕೇಂದ್ರ ಸಾಹಿತ್ಯ ಅಕಾಡೆಮಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಮುಂತಾದ ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾಗಿದ್ದ ಅವರು ಕನ್ನಡ ಸಾಹಿತ್ಯದ ಭೀಷ್ಮರೆಂದೇ ಪ್ರಕೀರ್ತಿತರಾಗಿದ್ದರು. ಅಪರೂಪದ ಸಂತ, ಅವಿರಳ ಜ್ಞಾನಿಯಾಗಿದ್ದ ಅವರು ನಾವೆಂದೂ ಮರೆಯಲಾಗದ ಧೀಮಂತ ವ್ಯಕ್ತಿ ಎಂದು ಶ್ರೀಗಳು ಸ್ಮರಿಸಿಕೊಳ್ಳುತ್ತ ಅವರಿಗೆ ಭಾವಪೂರ್ಣ ಶ್ರದ್ಧಾಸುಮನಗಳನ್ನು ಸಮರ್ಪಿಸಿದ್ದಾರೆ.

# ಇಂದು ಡಾ.ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯರ ಅಡ್ಡಪಲ್ಲಕ್ಕಿ ಮಹೋತ್ಸವ

ಬೈಲಹೊಂಗಲ– ತಾಲೂಕಿನ ವಣ್ಣೂರು ಗ್ರಾಮದ ಶ್ರೀ ವೀರಭದ್ರೇಶ್ವರ ಜಾತ್ರಾ ಮಹೋತ್ಸವ, ಶ್ರೀ ಜಗದ್ಗುರು ವಿಶ್ವರಾಧ್ಯ, ಶ್ರೀ ಪ್ರಭುದೇವರ ಮೂರ್ತಿ ಪ್ರತಿಷ್ಠಾಪಣೆ, ಬಾಳೇಹೊನ್ನೂರಿನ ರಂಭಾಪೂರಿ ಮಠದ ಪೂಜ್ಯ ಡಾ.ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯರ ಅಡ್ಡಪಲ್ಲಕ್ಕಿ ಮಹೋತ್ಸವ, ಧರ್ಮಸಭೆ ಕಾರ್ಯಕ್ರಮಗಳು ಮಾ. 28 ರಿಂದ ಏ. 1 ರವರೆಗೆ ಸಡಗರ–ಸಂಭ್ರಮದಿಂದ ಜರುಗಲಿವೆ.




ದಿ.28 ರಂದು ವಣ್ಣೂರು ಗ್ರಾಮದಲ್ಲಿ ಶ್ರೀ ವಿಶ್ವರಾಧ್ಯರ ಮತ್ತು ಶ್ರೀ ಪ್ರಭುದೇವರ ಮೂರ್ತಿಗಳ ಮೆರವಣಿಗೆ ನಡೆಯಲಿದೆ. ದಿ. 30 ರಂದು ಬ್ರಾಹ್ಮಿ ಮುಹೂರ್ತದಲ್ಲಿ ಮೂರ್ತಿಗಳ ಪ್ರತಿಷ್ಠಾಪಣೆ, ಬೆಳಿಗ್ಗೆ 9 ಘಂಟೆಗೆ ವೀರಭದ್ರೇಶ್ವರರ ಪಲ್ಲಕ್ಕಿ ಉತ್ಸವ, 12–30 ಕ್ಕೆ ಅನ್ನ ಪ್ರಸಾದ ನಡೆಯಲಿದೆ. ಏ. 1 ರಂದು ಬೆಳಿಗ್ಗೆ ಅಯ್ಯಾಚಾರ ದೀಕ್ಷಾ ಕಾರ್ಯಕ್ರಮ, 10–00 ಘಂಟೆಗೆ ಬಾಳೇಹೊನ್ನೂರಿನ ರಂಭಾಪೂರಿ ಶ್ರೀಗಳ ಅಡ್ಡ ಪಲ್ಲಕ್ಕಿ ಉತ್ಸವ, 11–00 ಘಂಟೆಗೆ ಧರ್ಮಸಭೆ ಜರುಗಲಿದೆ.

ಹಣಬರಹಟ್ಟಿಯ ಕೆಳದಿ ಹಿರೇಮಠದ ಪುಜ್ಯ ಬಸವಲಿಂಗ ಶಿವಾಚವಾರ್ಯ ಸ್ವಾಮೀಜಿ, ಹುಕ್ಕೇರಿ ಹಿರೇಮಠದ ಪೂಜ್ಯ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಸವದತ್ತಿಯ ಮೂಲಿಮಠದ ಪೂಜ್ಯ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ, ದೊಡವಾಡ ಹಿರೇಮಠದ ಪೂಜ್ಯ ಜಡಿಸಿದ್ದೇಶ್ವರ ಶಿವಾಚಾರ್ಯ ಸ್ವಾಮೀಜಿ, ಸಂಗೊಳ್ಳಿ ಹಿರೇಮಠದ ಪೂಜ್ಯ ಗುರುಲಿಂಗ ಶಿವಾಚಾರ್ಯ ಸ್ವಾಮೀಜಿ, ಮಲ್ಲಾಪೂರದ ಗಾಳೇಶ್ವರ ಮಠದ ಪೂಜ್ಯ ಚಿದಾನಂದ ಸ್ವಾಮೀಜಿ, ಸುತಗಟ್ಟಿಯ ಹಿರೇಮಠದ ಶ್ರೀ ಸಿದ್ದಲಿಂಗ ದೇವರು ಕಳಸದ ಹಿರೇಮಠದ ವೇ.ಮೂ. ವೀರಭದ್ರಶಾಸ್ತ್ರಿಗಳು, ರಾಣೇಬೆಣ್ಣೂರಿನ ಹಿರೇಮಠದ ವೇ.ಮೂ.ಪುನೀತ ಶಾಸ್ತ್ರಿಗಳು, ಸುತಗಟ್ಟಿಯ ಹಿರೇಮಠದ ವೇ.ಮೂ.ಚನ್ನಬಸಯ್ಯ ಶಾಸ್ತ್ರಿಗಳು, ಕಾಗತಿಯ ಶಿವಪೂಜಿ ಮಠದ ರಾಚಯ್ಯ ಸ್ವಾಮೀಜಿ ಸಾನಿಧ್ಯ ವಹಿಸಲಿದ್ದಾರೆ. ನಿಪ್ಪಾಣಿಯ ಶ್ರೀ ಹಾಲಸಿದ್ದನಾಥ ಸಹಕಾರಿ ಸಕ್ಕರೆ ಕಾರ್ಖಾನೆಯ ಎಂ.ಡಿ. ಶಿವು ಕುಲಕರ್ಣಿ ಅವರು ಕಾರ್ಯಕ್ರಮ ಉದ್ಘಾಟಿಸಲಿದ್ದು, ಚನ್ನಮ್ಮನ ಕಿತ್ತೂರು ಶಾಸಕ ಬಾಬಾಸಾಹೇಬ ಪಾಟೀಲ, ಮಾಜಿ ಶಾಸಕ ಮಹಾಂತೇಶ ದೊಡಗೌಡರ, ನೇಸರಗಿಯ ಸಿಪಿಐ ರಾಘವೇಂದ್ರ ಹವಾಲ್ದಾರ, ಪಿಡಿಓ ಮಲ್ಲಿಕಾರ್ಜುನ ನಾಯಕ, ಗುತ್ತಿಗೆದಾರ ಎಂ.ಬಿ.ಹಿರೇಮಠ ಮುಂತಾದವರು ಮುಖ್ಯ ಅಥಿತಿಗಳಾಗಿ ಆಗಮಿಸಲಿದ್ದಾರೆ. ಪ್ರತಿದಿನ ಸವದತ್ತಿಯ ಮೂಲಿಮಠದ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ಅವರಿಂದ ಅಧ್ಯಾತ್ಮಿಕ ಪ್ರವಚನ ಜರುಗಲಿದೆ. ಜಾತ್ರಾ ಮಹೋತ್ಸವದ ಅಂಗವಾಗಿ ವಿವಿಧ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳ ಆಯೋಜನೆ ಮಾಡಲಾಗಿದೆ. ಮೂರ್ತಿಗಳಿಗೆ ನಿತ್ಯ ವಿಶೇಷ ಪೂಜೆ, ಪ್ರಾರ್ಥನೆ, ಸಹಸ್ರ ಮಂತ್ರ ಪಠಣ, ಅಭೀಷೇಕ ಜರುಗಲಿವೆ ಎಂದು ಶ್ರೀ ಜಗದ್ಗುರು ವಿಶ್ವರಾಧ್ಯ ಟ್ರಸ್ಟ ಕಮೀಟಿ ಪ್ರಕಟಣೆಯಲ್ಲಿ ತಿಳಿಸಿದೆ.

# ಶ್ರೀಶೈಲ ಮಹಾಕ್ಷೇತ್ರದಲ್ಲಿ ಐದು ದಿನಗಳವರೆಗೆ ನಡೆಯಲಿರುವ ಯುಗಾದಿ ಮಹೋತ್ಸವಗಳು

ಆಂಧ್ರಪ್ರದೇಶ : ಯುಗಾದಿ ಮಹೋತ್ಸವಗಳಲ್ಲಿ ಶ್ರೀಸ್ವಾಮಿಯವರ ಸ್ಪರ್ಶದರ್ಶನೆಯ ನಿಲ್ಲುವಿಕೆ ಶ್ರೀಶೈಲ ಮಹಾಕ್ಷೇತ್ರದಲ್ಲಿ ಯುಗಾದಿ ಮಹೋತ್ಸವಗಳು ದಿನಾಂಕ: 06–04–2024 ರಿಂದ 10–04–2024 ರವರೆಗೆ ನಡೆಯಲಿವೆ ಎಂದು ದೇವಸ್ಥಾನದ ಉಪ ಕಲೆಕ್ಟರ್ ಮತ್ತು ಕಾರ್ಯನಿರ್ವಾಹಕ ಅಧಿಕಾರಿ ಡಿ.ಪೆದ್ದಿರಾಜು ಅವರು ಪತ್ರಿಕಾ ಪ್ರಕಟಣೆ ಮೂಲಕ ತಿಳಿಸಿದ್ದಾರೆ.



ಐದು ದಿನಗಳ ಕಾಲ ನಡೆಯುವ ಈ ಯುಗಾದಿ ಉತ್ಸವಗಳಲ್ಲಿ 6 ಲಕ್ಷಕ್ಕೆ ಮೀರಿ ಭಕ್ತರು ಶ್ರೀಶೈಲ ಕ್ಷೇತ್ರವನ್ನು ಸಂದರ್ಶಿಸಬಹುದೆಂದು ಭಾವಿಸಲಾಗಿದೆ. ಯುಗಾದಿ ಉತ್ಸವಗಳು ಪ್ರಾರಂಭವಾಗುವ 10 ದಿನಗಳ ಮೊದಲು ಅಂದರೆ ದಿನಾಂಕ: 27–03–2024 ರಿಂದ ಹೆಚ್ಚಿನ ಸಂಖ್ಯೆಯ ಭಕ್ತರು ಈ ಸ್ಥಳಕ್ಕೆ ಆಗಮಿಸುತ್ತಾರೆ.

ಈ ಉತ್ಸವಗಳಿಗೆ ಕರ್ನಾಟಕ ರಾಜ್ಯದಿಂದ ವಿಶೇಷವಾಗಿ ಉತ್ತರ ಕರ್ನಾಟಕದ ಭಕ್ತರು ಮತ್ತು ಮಹಾರಾಷ್ಟ್ರದ ಸೋಲಾಪುರ, ಸಾಂಗ್ಲಿ ಹಾಗೂ ಇತರ ಭಾಗಗಳಿಂದ ಕೂಡ ಭಕ್ತರು ಸೇರುತ್ತಾರೆ. ಹಲವು ಪ್ರದೇಶಗಳಿಂದ ಭಕ್ತರು ಪಾದಯಾತ್ರೆಯೊಂದಿಗೆ ಶ್ರೀಶೈಲಕ್ಕೆ ಆಗಮಿಸುತ್ತಿರುವುದು ವಿಶೇಷವಾಗಿದೆ ಎಂದು ತಿಳಿಸಿರುವ ಅವರು ಯುಗಾದಿ ಮಹೋತ್ಸವಗಳಲ್ಲಿ ಸರ್ವ ಭಕ್ತರಿಗೆ ಅನುಕೂಲವಾದ ದರ್ಶನಕ್ಕಾಗಿ ದಿನಾಂಕ : 06–04–2024 ರಿಂದ 10–04–2024 ರವರೆಗೆ ಶ್ರೀ ಮಲ್ಲಿಕಾರ್ಜುನ ಸ್ವಾಮಿಯ ಅಲಂಕಾರಿಕ ದರ್ಶನ (ಲಘು ದರ್ಶನ)ವನ್ನು ಒದಗಿಸಲಾಗುವುದು ಎಂದು ತಿಳಿಸಿದ್ದಾರೆ.

ಯುಗಾದಿ ಉತ್ಸವ ದಿನಗಳಲ್ಲಿ ಸ್ವಾಮಿಯ ಸ್ಪರ್ಶದರ್ಶನಕ್ಕೆ ಅವಕಾಶವಿಲ್ಲ. ಆದಾಗ್ಯೂ, ಉತ್ಸವಗಳ 10 ದಿನಗಳ ಹಿಂದಿನಿಂದ ಅಂದರೆ ದಿನಾಂಕ: 27–03–2024 ರಿಂದ 05–04–2024ರ ವರೆಗೆ ಭಕ್ತರಿಗೆ ಪ್ರತಿದಿನ ನಿರ್ದಿಷ್ಟ ಸಮಯಗಳಲ್ಲಿ ನಾಲ್ಕು ಹಂತಗಳಾಗಿ ಶ್ರೀ ಸ್ವಾಮಿಯವರನ್ನು ಸ್ಪರ್ಶಿಸುವ ಸ್ಪರ್ಶದರ್ಶನಕ್ಕೆ ಅವಕಾಶ ನೀಡಲಾಗುತ್ತದೆ.

ಈ ಸ್ಪರ್ಶದರ್ಶನದ ಟಿಕೆಟ್ ಶುಲ್ಕ 500 ರೂ.ನಿಗದಿಪಡಿಸಲಾಗಿದೆ. ಪ್ರತಿ ಹಂತದಲ್ಲಿ 1500 ಟಿಕೆಟ್ ಗಳನ್ನು ಮಾತ್ರ ನೀಡಲಾಗುವುದು. ಭಕ್ತರು ನಿರ್ದಿಷ್ಟ ಸಮಯಗಳಲ್ಲಿ ಕರೆಂಟ್ ಬುಕಿಂಗ್ ಮೂಲಕ ಈ ಟಿಕೆಟ್ ಗಳನ್ನು ದೇವಸ್ಥಾನದಲ್ಲಿಯೇ ಪಡೆಯಬಹುದೆಂದು ಅವರು ಹೇಳಿದ್ದಾರೆ.

ಈ ನಿಟ್ಟಿನಲ್ಲಿ ಕರ್ನಾಟಕ ಮತ್ತು ಮಹಾರಾಷ್ಟ್ರದ ಹಲವು ಭಕ್ತರ ಸಂಘಗಳು, ಪಾದಯಾತ್ರೆ ತಂಡಗಳು, ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳೊಂದಿಗೆ ದಿನಾಂಕ : 21–03–2024 ರಂದು ಬಾಗಲಕೋಟ ಜಿಲ್ಲೆಯ ರಬಕವಿ ನಗರದಲ್ಲಿ ಸಮನ್ವಯ ಸಭೆಯನ್ನು ಸಹ ಆಯೋಜಿಸಲಾಗಿತ್ತು ಎಂದು ತಿಳಿಸಲಾಗಿದೆ.

ಸಮಸ್ತ ಭಕ್ತರಿಗೆ ದರ್ಶನದ ಬಗ್ಗೆ ಬೇಕಾದ ಸಮಾಚಾರವನ್ನು ತಿಳಿಸಲು, ಭಕ್ತ ಸಮೂಹಗಳ ಪ್ರತಿನಿಧಿಗಳಿಗೆ ಹಬ್ಬದ ದಿನಗಳಲ್ಲಿ ದರ್ಶನ ವ್ಯವಸ್ಥೆ ಹಾಗೂ ದೇವಸ್ಥಾನದ ಭಕ್ತರಿಗೆ ಒದಗಿಸುವ ಸೌಲಭ್ಯಗಳ ಕುರಿತು ಮಾಹಿತಿ ನೀಡಲಾಯಿತು. ಯುಗಾದಿ ಹಬ್ಬದ ಪ್ರಯುಕ್ತ ದೇವಾಲಯವು ಭಕ್ತರ ಅನುಕೂಲಕ್ಕಾಗಿ ವಿವಿಧ ವ್ಯವಸ್ಥೆಗಳನ್ನು ಮಾಡುತ್ತಿದೆ. ಮುಖ್ಯವಾಗಿ ಪಾದಚಾರಿ ಮಾರ್ಗ, ಭಕ್ತರಿಗೆ ವಿಶ್ರಾಂತಿ ಪಡೆಯಲು ತಂಪಾದ ಹೊರಾಂಗಣ ಚಪ್ಪರಗಳು, ಕುಡಿಯುವ ನೀರು, ಅನ್ನಸಂತರ್ಪಣೆ, ಅನುಕೂಲವಾದ ದರ್ಶನ ವ್ಯವಸ್ಥೆ, ವಾಹನ ನಿಲುಗಡೆ ವ್ಯವಸ್ಥೆ, ಭಕ್ತರು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹೋಗಲು ಉಚಿತ ಬಸ್‌ಗಳ ವ್ಯವಸ್ಥೆ, ಉಚಿತ ಬ್ಯಾಟರಿ ವಾಹನಗಳ ವ್ಯವಸ್ಥೆ, ನೈರ್ಮಲ್ಯ ನಿರ್ವಹಣೆ, ಸ್ವಚ್ಛತಾ ವ್ಯವಸ್ಥೆ ಇತ್ಯಾದಿಗಳನ್ನು ವ್ಯವಸ್ಥೆ ಮಾಡಲಾಗುತ್ತಿದೆ. ಆದುದರಿಂದ ಸರ್ವ ಭಕ್ತಾಧಿಗಳು ಈ ವಿಷಯಗಳನ್ನು ಗಮನಿಸಿ ದೇವಸ್ಥಾನದ ವತಿಯಿಂದ ಹಮ್ಮಿಕೊಂಡಿರುವ ಧಾರ್ಮಿಕ ಕಾರ್ಯಕ್ಕೆ ಸಹಕರಿಸಬೇಕೆಂದು ವಿನಂತಿ ಮಾಡಲಾಗಿದೆ.

ಈ ಸಂದರ್ಭದಲ್ಲಿ ಸಮಸ್ತ ಭಕ್ತಾಧಿಗಳು ಶ್ರೀ ಭ್ರಮರಾಂಬಾ ಮಲ್ಲಿಕಾರ್ಜುನಸ್ವಾಮಿಯವರ ಅನುಗ್ರಹವನ್ನು ಸದಾ ಪಡೆಯಲಿ ಎಂದು ಡಿ. ಪೆದ್ದಿರಾಜು, ಉಪ ಕಲೆಕ್ಟರ್ ಮತ್ತು ಕಾರ್ಯನಿರ್ವಾಹಕ ಅಧಿಕಾರಿ ಪ್ರಕಟಣೆ ಮೂಲಕ ಹಾರೈಸಿದ್ದಾರೆ.

# ನವೀನ ಬೋಧನೆ– ಸಂಶೋಧನೆ ಕುರಿತು ಒಂದು ದಿನದ ಕಾರ್ಯಾಗಾರ



ಬೆಳಗಾವಿ.ಭರತೇಶ ಶಿಕ್ಷಣ ಸಂಸ್ಥೆಯ ಜೆಜಿಎನ್‌ಡಿ ಭರತೇಶ ವಾಣಿಜ್ಯ ಮಹಾವಿದ್ಯಾಲಯದಲ್ಲಿ ಇತ್ತಿಚಿಗೆ ನವೀನ ಬೋಧನೆ–ಸಂಶೋಧನೆ ಮತ್ತು ಅಭಿವೃದ್ದಿಯತ್ತ ಇಂದು ಪ್ರಾಡಿಗ್ಮ ಶೀಪ್ಟ ವಿಷಯದ ಒಂದು ದಿನದ ಅಧ್ಯಾಪಕರ ಅಭಿವೃದ್ದಿ ಕಾರ್ಯಾಗಾರ ನಡೆಯಿತು.

ಈ ಕಾರ್ಯಾಗಾರಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ ವಿತಾವಿಯ ವ್ಯವಸ್ಥಾಪನ ವಿಭಾಗದ ಪ್ರಾಧ್ಯಾಪಕರಾದ ಡಾ. ಎಂ.ಎಂ.ಮುನ್ಶಿ ಹಾಗೂ ರಾನಿ ಚೆನ್ನಮ್ಮ ವಿಶ್ವ ವಿದ್ಯಾಲಯದ ವಾಣಿಜ್ಯ ವಿಭಾಗದ ಪ್ರಾಧ್ಯಾಪಕರಾಗ ಡಾ.ಎಸ್.ಬಿ ಆಕಾಶ ಅವರು ಆಗಮಿಸಿ ಸೃಜನಾತ್ಮಕ ಬೋಧನಾ ಸಾಧನೆಗಳು ಮತ್ತು ಅದರ ಫಲಿತಾಂಶ ಆಧಾರಿತ ಕಲಿಕೆಯ ಬಗ್ಗೆ ಮಾಹಿತಿ ನೀಡಿ ಅಧ್ಯಾಪಕರು ಸಂಶೋಧಣೆಯ ಪ್ರಾಮುಖ್ಯತೆ ಮೇಲೆ ಹೆಚ್ಚಿನ ಆಸಕ್ತಿ ಹೊಂದಿರಬೇಕೆಂದು ತಿಳಿಸಿದರು. ಕಾರ್ಯಾಗಾರದಲ್ಲಿ ಭರತೇಶ ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷ ಶ್ರೀಪಾಲ ಖೇಮಲಾಪೂರೆ, ಮಹಾವಿದ್ಯಾಲಯದ ಆಡಳಿತ ಮಂಡಳಿಯ ಅಧ್ಯಕ್ಷ ಹೀರಾಚಂದ ಕಲಮನಿ, ಪ್ರಾಂಶುಪಾಲ ಸುನಿತಾ ದೇಶಪಾಂಡೆ, ನೀತಾ ಗಂಗರಡ್ಡಿ ಸೇರಿದಂತೆ ಮೊದಲಾದವರು ಉಪಸ್ಥಿತರಿದ್ದರು.

# ದೇಹದಾನ ಮಾಡಿ ಸಾವಿನಲ್ಲಿ ಸಾರ್ಥಕತೆ ಮೆರೆದ ಹಿರಿಯ ಸಾಹಿತಿ ಡಾ.ಗುರುಲಿಂಗ ಕಾಪಸೆ : ಡಾ.ಪ್ರಭಾಕರ ಕೋರೆ ಕಂಬನಿ

ಬೆಳಗಾವಿ: ಹಿರಿಯ ಅನುಭಾವಿಗಳು, ಕನ್ನಡದ ಶ್ರೇಷ್ಠ ವಿದ್ವಾಂಸರು, ಧಾರವಾಡ ಕವಿವಿಯಲ್ಲಿ ಸಾವಿರಾರು ವಿದ್ಯಾರ್ಥಿಗಳ ಬದುಕಿಗೆ ಬೆಳಕು



ನೀಡಿದ ಗುರುಗಳಾದ ಧಾರವಾಡದ ಸಪ್ತಾಪೂರ ದುರ್ಗಾ ಕಾಲೋನಿಯ ನಿವಾಸಿ ಡಾ. ಗುರುಲಿಂಗ ಶಂಕರಪ್ಪ ಕಾಪಸೆ (96) 26.03.2024 ರಂದು ನಿಧನ ರಾದರು. ಅವರ ನಿಧನದಿಂದ ನಾಡಿಗೆ ತುಂಬಲಾರದ ದುಃಖವನ್ನು ಂಟುಮಾಡಿದೆ ಎಂದು ಕೆಎಲ್‌ಇ ಸಂಸ್ಥೆ ಕಾರ್ಯಾಧ್ಯಕ್ಷರಾದ ಡಾ .ಪ್ರಭಾಕರ ಕೋರೆಯವರು ಕಂಬನಿ ಮಿಡಿದಿದ್ದಾರೆ.ಬೆಳಗಾವಿಯಲ್ಲಿ ಧಾರವಾಡ ವಿಶ್ವವಿದ್ಯಾಲಯದ ಪಿ ಜಿ ಸೆಂಟರ್ 80ರ ದಶಕದಲ್ಲಿ ಬೆಳಗಾವಿಯ ಲಿಂಗರಾಜ ಕಾಲೇಜಿನ ಆಭರಣದಲ್ಲಿ ಪ್ರಾರಂಭಿಸಲು ಕೆಎಲ್‌ಇ ಸಂಸ್ಥೆಯು ಎಲ್ಲ ರೀತಿಯ ಸಹಾಯವನ್ನು ನೀಡಿತು. ಡಾ. ಗುರುಲಿಂಗ ಕಾಪಸೆ ಅವರು ಈ ಕೇಂದ್ರದ ಆಡಳಿತ ಅಧಿಕಾರಿಗಳಾಗಿ ಅನನ್ಯವಾದ ಕೊಡುಗೆಯನ್ನು ನೀಡಿ ಕಟ್ಟಿ ಬೆಳೆಸಿದರು. ಅಂದಿನಂದ ಕೆಎಲ್‌ಇ ಹಾಗೂ ಅವರ ನಡುವಿನ ಸ್ನೇಹ ಸೇತುವೆ ಬೆಸೆದುಕೊಂಡಿತು. ಕಾಲಕಾಲಕ್ಕೆ ಸಂಸ್ಥೆಯನ್ನು ಮಾರ್ಗದರ್ಶಿಸಿದರು. ಇಂದು ರಾಣಿ ಚನ್ನಮ್ಮಾ ವಿವಿ ರೂಪುಗೊಂಡಿದ್ದು ಅಂದಿನ ಕಾಪಾಸೆಯವರಂತಹ ಕೆಎಲ್‌ಇ ಶತಮಾ ನೋತ್ಸವದಲ್ಲಿಯೂ ಲಿಂಗರಾಜ ಕಾಲೇಜು ಗ್ರಂಥಕ್ಕೆ ಮುನ್ನುಡಿಯನ್ನು ಬರೆದು ಕೊಟ್ಟರು. ಸಾಹಿತ್ಯಕವಾಗಿ ಸಾಂಸ್ಕೃತಿಕವಾಗಿ ಸಂಶೋಧನಾತ್ಮಕವಾಗಿ ಅವರು ನಾಡಿಗೆ ಅಪಾರ ಕೊಡುಗೆ ನೀಡಿದ್ದಾರೆ. ಅವರ ನಿಧನ ನೋವು ತಂದಿದೆ ಎಂದು ಡಾ. ಕೋರೆ ಅವರು ಸಮಸ್ತ ಕೆಎಲ್‌ಇ ಪರಿವಾರದಿಂದ ಭಾವಪೂರ್ಣ ಶ್ರದ್ಧಾಂಜಲಿಯನ್ನು ಸಲ್ಲಿಸಿದ್ದಾರೆ. ಕೆಎಲ್‌ಇ ಬಿ.ಎಂ. ಕಂಕಣವಾಡಿ ಆಯುರ್ವೇದ ಕಾಲೇಜಿಗೆ ದೇಹದಾನ: ಡಾ. ಗುರುಲಿಂಗ ಕಾಪಸೆ ಅವರ ಅಂತಿಮ ಇಚ್ಛೆಯಂತೆ ಡಾ. ರಾಮಣ್ಣವರ ಚಾರಿಟೇಬಲ್ ಟ್ರಸ್ಟ್ ಬೈಲಹೊಂಗಲದ ಮುಖಾಂತರ ಬೆಳಗಾವಿಯ ಕೆಎಲ್‌ಇ ಆಯುರ್ವೇದ ಮಹಾವಿದ್ಯಾಲಯಕ್ಕೆ ದೇಹದಾನ ಮಾಡಿ ಸಾವಿನಲ್ಲು ಸಾರ್ಥಕತೆ ಮೆರೆದಿದ್ದಾರೆ. ಕೆಎಲ್‌ಇ ಬಿ.ಎಂ.ಕಂಕಣವಾಡಿ ಆಯುರ್ವೇದ ಕಾಲೇಜಿನ ಶರೀರ ರಚನಾ ವಿಭಾಗದ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು ಡಾ. ಮಹಾಂತೇಶ ರಾಮಣ್ಣವರ ಅವರಿಗೆ ಕಾಪಸೆ ಅವರ ದೇಹವನ್ನು ಹಸ್ತಾಂತರ ಮಾಡಿದರು. ದೇಹದಾನ ಮಾಡಿ ಕುಟುಂಬಕ್ಕೆ ಡಾ.ಕೋರೆಯವರು ಕೃತಜ್ಞತೆ ಸಲ್ಲಿಸಿದ್ದಾರೆ. ಮೃತರಿಗೆ ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

# ಮಾಗಿದ ಹಣ್ಣಿನ ಪರಿಮಳದಿಂದ ಕ್ಯಾನ್ಸರ್ ಬೆಳವಣಿಗೆ ತಡೆಯಬಹುದಂತೆ



ಕೋವಿಡ್–19ರ ಸಾಂಕ್ರಾಮಿಕ ಪಿಡುಗು ಕಾಣಿಸಿಕೊಂಡ ಬಳಿಕ ನಮ್ಮ ಘ್ರಾಣೇಂದ್ರಿಯದ (ವಾಸನೆಗಳನ್ನು ಗ್ರಹಿಸುವ ಅಂಗ) ಕಡೆಗೆ ಗಮನ ಹೆಚ್ಚಾಗಿದ್ದು, ಇದು ಸಂಶೋಧನೆಗಳತ್ತಲೂ ಮಾರ್ಗ ತೋರಿಸಿದೆ. ಮೂಗಿನ ಹೊರಳೆಗಳ ಮಿತಿಯಾಚೆಗೆ ವಾಸನೆಗಳಿಗೂ (ದುರ್ಗಂಧಗಳಿಗೂ) ಮತ್ತು ವಂಶವಾಹಿ ಅಭಿವ್ಯಕ್ತಿಗೂ ನಡುವೆ ಗಣನೀಯ ಸಂಬಂಧವಿದೆ ಎಂಬುದನ್ನು ಇತ್ತೀಚಿನ ಅಧ್ಯಯನಗಳು ತೋರಿಸಿವೆ. ಈ ಶೋಧನೆಗಳು ಕ್ಯಾನ್ಸರ್ ಮತ್ತು ನರ ಸವೆಸುವ ರೋಗಗಳ ವಿರುದ್ಧದ ಹೋರಾಟದಲ್ಲಿ ಬಾಷ್ಪಶೀಲ (ಕೊಳೆಯುವ) ವಸ್ತುಗಳ ಚಿಕಿತ್ಸಕ ಉಪಯೋಗದ ಕುರಿತು ವಿಜ್ಞಾನಿಗಳಲ್ಲಿ ಜಿಜ್ಞಾಸೆ ಮೂಡಿಸಿವೆ. ಈ ಸಂಶೋಧನೆಗಳಿಂದ ಹೊರಹೊಮ್ಮಿರುವ ಅನಿರೀಕ್ಷಿತ ವಿಚಾರವೆಂದರೆ ವಂಶವಾಹಿ ಅಭಿವ್ಯಕ್ತಿಯ ಮೇಲೆ ವಾಸನೆಗಳ ನೇರ ಪರಿಣಾಮವಿದೆ ಎನ್ನುವುದಾಗಿದೆ.

ಈ ಆವಿಷ್ಕಾರವು ಕೆಲವು ನಿಗದಿತ ಚಿಕಿತ್ಸೆಗಳಲ್ಲಿ ಸುಗಂಧದ ಶಕ್ತಿಯ ಬಳಕೆಯ ಸಾಧ್ಯತೆಯನ್ನು ಪರಿಗಣಿಸಬಹುದೇ ಎಂದು ವಿಜ್ಞಾನಿಗಳು ಚಿಂತಿಸುವಂತೆ ಮಾಡಿದೆ. ಕೊಳೆಯುವ ಹಣ್ಣುಗಳು ಮತ್ತು ಕೆಲವು ಆಹಾರ ಪದಾರ್ಥಗಳಲ್ಲಿ ಕಾಣಸಿಗುವ ಬಾಷ್ಪಶೀಲ ವಸ್ತುವಾದ ಡಯಾಸೆಟಿಲ್ ಆವಿಗೆ ಒಡ್ಡಿಕೊಳ್ಳುವುದು ಮಹತ್ವದ ಒಳನೋಟಗಳನ್ನು ಒದಗಿಸಿದೆ. ನೊಣಗಳು, ಇಲಿ ಮತ್ತು ಡಯಾಸೆಟಿಲ್‌ಗೆ ಸಂಬಂಧಪಡುವ ಮಾನವ ಜೀವಕೋಶಗಳು ವಂಶವಾಹಿ ಅಭಿವ್ಯಕ್ತಿಯಲ್ಲಿ, ವಿಶೇಷವಾಗಿ ಮಿದುಳು ಮತ್ತು ಶ್ವಾಸಕೋಶಗಳಂಥ ಮಹತ್ವದ ಅಂಗಗಳಲ್ಲಿ ಗಣನೀಯ ಪರಿವರ್ತನೆಯನ್ನು ತರುವುದು ಕಂಡುಬಂದಿದೆ.

ಗಣನೀಯವಾಗಿ ಡಯಾಸೆಟಿಲ್ ಕ್ಯಾನ್ಸರ್ ಚಿಕಿತ್ಸೆಯಲ್ಲಿ ಬಳಸಲಾಗುವ ಹಿಸ್ಟೋನ್ ಡೀ ಅಸೆಟಲೇಸ ಇನ್‌ಹಿಬಿಟರ್ (ಹೆಚ್‌ಡಿಎಸಿ)ನಂತೆ ಕಾರ್ಯನಿರ್ವಹಿಸುತ್ತದೆ. ವಿಜ್ಞಾನಿಗಳ ಈ ಆವಿಷ್ಕಾರದಿಂದ ಕ್ಯಾನ್ಸರ್ ಬೆಳೆಯದಂತೆ ಮತ್ತು ನರಕೋಶಗಳು ಸವೆಯದಂತೆ ತಡೆಗಟ್ಟುವ ಉತ್ತಮ ಚಿಕಿತ್ಸಾ ಕಾರ್ಯತಂತ್ರಗಳನ್ನು ಅಭಿವೃದ್ಧಿಪಡಿಸಬಹುದು ಎಂಬ ಆಶಾಭಾವನೆ ಮೂಡಿದೆ.ಹೀಗಿದ್ದರೂ ಆರೋಗ್ಯದ ಮೇಲೆ ಇದರಿಂದ ಆಗುವ ಅಪಾಯಗಳ ಆತಂಕ ನಿವಾರಿಸಿಕೊಳ್ಳಲು ಮತ್ತಷ್ಟು ಅಧ್ಯಯನಗಳು ನಡೆಯಬೇಕಿದೆ. ಡಯಾಸಿಟೈಲ್ ಕ್ಯಾನ್ಸರ್ ಕಣದ ಬೆಳವಣಿಗೆ ಮತ್ತು ನರಕೋಶಗಳ ಸವಕಳಿ ತಡೆಯುವ ಬಗ್ಗೆ ಭರವಸೆ ಮೂಡಿಸುತ್ತಿದ್ದರೂ ಆಬ್ಲಿಟರೇಟಿವ್ ಬ್ರಾಂಕಿಯೋಲೈಟಿಸ್‌ನಂತಹ ಶ್ವಾಸಕೋಶಗಳ ಕಾಯಿಲೆಗಳಲ್ಲಿ ಇದರ ಸಂಬಂಧ ಕುರಿತಂತೆ ಎಚ್ಚರಿಕೆಯ ಸಂದೇಶ ರವಾನಿಸಿದೆ. ಹೀಗಾಗಿ ಕೊಳೆಯುವ ವಸ್ತುಗಳನ್ನು ಚಿಕಿತ್ಸಕ ಬಳಕೆಗೆ ಪರಿಗಣಿಸುವ ಮುನ್ನ ಅವುಗಳ ಸುರಕ್ಷಿತತೆ ಮತ್ತು ಕಾರ್ಯದಕ್ಷತೆ ಬಗ್ಗೆ ಗಹನ ಸಂಶೋಧನೆಗಳು ನಡೆಯಬೇಕಿದೆ.

ಮಿಗಿಲಾಗಿ ಈ ಸಂಶೋಧನೆ ಕೃಷಿ ಪದ್ಧತಿಗಳು ಮತ್ತು ಸುರಕ್ಷತಾ ಮೌಲ್ಯಮಾಪನಗಳಿಗಾಗಿನ ವ್ಯಾಪಕ ಪರಿಣಾಮಗಳನ್ನು ಇನ್ನೂ ರುಜುವಾತುಪಡಿಸಿಲ್ಲ. ಇದು ದೈನಂದಿನ ಜೀವನದಲ್ಲಿ ಎದುರುಗೊಳ್ಳುವ ಬಾಷ್ಪಶೀಲ ರಾಸಾಯನಿಕಗಳ ಸುರಕ್ಷತೆಯನ್ನು ಅಂದಾಜಿಸುವುದರ ಪ್ರಾಮುಖ್ಯದ ಬಗ್ಗೆ ಗಮನ ಸೆಳೆದಿದೆ. ಇವುಗಳಲ್ಲಿ ಆಹಾರ ಮತ್ತು ಸೂಕ್ಷ್ಮ ಜೈವಿಕ ಮೂಲಗಳಿಂದ ಹೊರಸೂಸುವ ಗಂಧಗಳೂ ಸೇರಿವೆ. ಇಷ್ಟೇ ಅಲ್ಲದೆ ಈ ಅಧ್ಯಯನವು ಈ ವಿಚಾರವನ್ನು ವ್ಯವಸಾಯದಲ್ಲೂ ಅಳವಡಿಸಿಕೊಳ್ಳಲು ಸಲಹೆ ಮಾಡುತ್ತದೆ. ಏಕೆಂದರೆ ಪರಿಸರದಲ್ಲಿ ಸಸ್ಯಗಳೂ ಸಹ ಕೊಳೆಯುವ ವಸ್ತುಗಳಿಗೆ ಪ್ರತಿಕ್ರಿಯಿಸುತ್ತವೆ.